ಬೆಳಗಾವಿ ಜಿಲ್ಲೆಯ ಮಾರ್ಕಂಡೇಯ ಯೋಜನೆಯ ಪ್ರಗತಿ:

(1) 1 ಶ್ರೀ ಆಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ): ಮಾನ್ಯ ಭಾರಿ ಸಣ್ಣ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳಗಾವಿ ಜಿಲ್ಲೆಯ ಮಾರ್ಕಂಡೇಯ ಯೋಜನೆಗೆ 1999-2000 ಸಣ್ಣ ಮತ್ತು 2000-2001ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು;

2) ಈ ಯೋಜನೆಗೆ ಇಲ್ಲಿಯವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

3) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ಹಾಗೂ ಎಷ್ಟು ಪ್ರದೇಶ ನೀರಾವರಿ ಸೌಲಭ್ಯ ಹೊಂದುವುದು?

ಶ್ರೀ ಎಚ್.ಕೆ. ಪಾಟೀಲ್ (ಭಾರಿ ಸಣ್ಣ ಮತ್ತು ಮಧ್ಯಮ ನೀರಾವರಿ ಸಚಿವರು)

1) ಮಾರ್ಕಂಡೇಯ ಯೋಜನೆಗೆ ಆಯವ್ಯಯದಲ್ಲಿ ಈ ಕೆಳಕಂಡಂತೆ ಹಣವನ್ನು ಒದಗಿಸಲಾಗಿದೆ:

1999-2000	ರೂ. 4704.00 ಲಕ್ಷ
2000-2001	ರೂ. 7500.00 ಲಕ್ಷ

2)

1999ರ ಮಾರ್ಚ್ ಅವರೆಗೆ ಆದ ವೆಚ್ಚ	ರೂ. 1144.97 ಲಕ್ಷ
1999-2000ರ ಅಂತ್ಯದವರೆಗೆ ಆದ ವೆಚ್ಚ	ರೂ. 1013.04 ಲಕ್ಷ
2000-2001 (ಜನವರಿ 2001ರ ಅಂತ್ಯದವರೆಗೆ)	ರೂ. 3393.37 ಲಕ್ಷ
ಒಟ್ಟು	ರೂ. 5551.38 ಲಕ್ಷ

3) ಈ ಯೋಜನೆಯನ್ನು ಮಾರ್ಚ್ 2003ರ ಹೇಳಿಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆ ಅಡಿಯಲ್ಲಿ ಒಟ್ಟು 19150 ಹೆ. ಪ್ರದೇಶ ನೀರಾವರಿ ಹೊಂದಲಿದೆ.

ಬೆಳಗಾವಿ ಜಿಲ್ಲೆಯ ಚಿತ್ರಿನದಿಯಿಂದ ಹಿರಣ್ಯಕೇಶಿ ನದಿಗೆ ನೀರು ಬಿಡುವುದು:

2 (2) ಶ್ರೀ ಆಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ): ಮಾನ್ಯ ಭಾರಿ ಸಣ್ಣ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳಗಾವಿ ಜಿಲ್ಲೆಯ ಹಿರಣ್ಯಕೇಶಿ ನದಿಗೆ ಬೇಸಿಗೆ ತಿಂಗಳುಗಳಲ್ಲಿ (ಜನವರಿಯಿಂದ ಏಪ್ರಿಲ್ ವರೆಗೆ) ಮಹಾರಾಷ್ಟ್ರದ ಚಿಕ್ಕಿ ನದಿಯಿಂದ ನೀರು ಬಿಡುವ ಬಗ್ಗೆ ಮಹಾರಾಷ್ಟ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ;

2) ಸಲ್ಲಿಸಿದ್ದಲ್ಲಿ ಪ್ರಸ್ತಾವನೆಯನ್ನು ಯಾವಾಗ ಸಲ್ಲಿಸಲಾಗುವುದು;

3) ಈ ಪ್ರಸ್ತಾವನೆ ಕುರಿತು ಮಹಾರಾಷ್ಟ್ರ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು?